**ಸಿವಿಲ್ ನ್ಯಾಯಾಧೀಶರು ಮತ್ತು ಪ್ರ ದ ನ್ಯಾದಂ. ರವರ ನ್ಯಾಯಾಲಯ,**

**ಪೊನ್ನಂಪೇಟೆ**

**ಸಿ.ಸಿ. ನಂ. 698/2023 ಫ್ರಾ.ಸಾ -6**

**ಚಾ.ಸಾ – 5**

**ದಿನಾಂಕಃ–28.07.2026. ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

| | | |
|---|---|---|
| ಸಾಕ್ಷಿಯ ಹೆಸರು | : | ಕೀರ್ತಿ ಕುಮಾರ್ |
| ತಂದೆಯ ಹೆಸರು | : | ರವಿ |
| ವಯಸ್ಸು | : | 27 ವರ್ಷ |
| ಉದ್ಯೋಗ | : | ಕೂಲಿ ಕೆಲಸ |
| ವಾಸ ಸ್ಥಳ | : | ಬ್ರಹ್ಮಗಿರಿ |

**ಮುಖ್ಯ ವಿಚಾರಣೆ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ–**

ಚಾಸಾ 1 ರಿಂದ 4 ರವರು ಮತ್ತು ಆರೋಪಿ ಗೊತ್ತು. ಸಾಕ್ಷಿಗೆ ನಿ ಪಿ 3 ಮಹಜರ್ ನಲ್ಲಿ ಸಹಿ ನೋಡಿ ಗುರುತಿಸಿದ್ದು ಸಹಿಯನ್ನು ನಿ ಪಿ 3(ಡಿ) ಎಂದು ಗುರುತಿಸಲಾಯಿತು. ಸದರಿ ಸಹಿಯನ್ನು ಸುಮಾರು 2 ವರ್ಷಗಳ ಹಿಂದೆ ಬ್ರಹ್ಮಗಿರಿಯಲ್ಲಿ ಸಹಿ ಹಾಕಿರುತ್ತೇನೆ. ನಿ ಪಿ 3 ರಲ್ಲಿ ಬರೆದಿರುವ ವಿಚಾರಗಳು ಗೊತ್ತಿಲ್ಲ. ನನ್ನ ಸಮಕ್ಷಮ ಯಾವುದೇ ವಸ್ತುಗಳನ್ನು ಅಮಾನತುಪಡಿಸಿಕೊಂಡಿಲ್ಲ. ಪೊಲೀಸರು ನನ್ನ ಹೇಳಿಕೆ ಪಡೆದುಕೊಂಡಿಲ್ಲ.

**(ಈ ಹಂತದಲ್ಲಿ ಸಾಕ್ಷಿಯು ತನ್ನ ಹೇಳಿಕೆಗೆ ಪ್ರತಿಕೂಲವಾಗಿ ಸಾಕ್ಷ್ಯ ನುಡಿಯುತ್ತಿರುವುದರಿಂದ, ಮಾನ್ಯ ಎಪಿಪಿರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ, ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ನೀಡಲಾಯಿತು)**

**ಪಾಟೀ ಸವಾಲುಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ–**

ದಿ. 06.04.2023 ರಂದು ಮ. 12.30ಕ್ಕೆ ನಾನು ಮತ್ತು ಚಾಸಾ 4 ರವರು ಕಾನೂರು ಜಂಕ್ಷನ್ ನಲ್ಲಿ ಬಸ್ ಗಾಗಿ ಕಾಯುತ್ತಿದ್ದಾಗ ಚಾಸಾ 2 ರವರು ನಮ್ಮಗಳನ್ನು ಪಂಚನಾಮೆಗೆ ಸಾಕ್ಷಿದಾರರನ್ನಾಗಿ ಕರೆದಿದ್ದು ನಾವುಗಳು ಅದಕ್ಕೆ ಒಪ್ಪಿದ್ದು ನಾವು ಪೊನ್ನಂಪೇಟೆ ಪೊ.ಠಾಣೆಗೆ ಹೋದ ನಂತರ ಈಪ್ರಕರಣದ ವಿಚಾರಗಳನ್ನು ತಿಳಿಸಿ ನಮ್ಮನ್ನು ಬ್ರಹ್ಮಗಿರಿಯ

ಪೈಸಾರಿ ಪ್ರಕಾಶ್ ರವರ ಮನೆಯ ಮುಂದೆ ಕರೆದುಕೊಂಡು ಹೋಗಿದ್ದು ಅಲ್ಲಿ ಆರೋಪಿ ಅಕ್ರಮವಾಗಿ ಮಧ್ಯ ಮಾರಾಟ ಮಾಡುತ್ತಿದ್ದರು ಎಂದರೆ ಸರಿಯಲ್ಲ. ನಾವೆಲ್ಲರೂ 12.45ಕ್ಕೆ ದಾಳಿ ಮಾಡಿದಾಗ ಆರೋಪಿ ಬಳಿ ಇದ್ದ 90 M.L. ನ 30 Original choice whisky tetra packet ಗಳನ್ನು ನಿ ಪಿ 3 ರಂತೆ ನಮ್ಮಗಳ ಸಮಕ್ಷಮ ಮ. 01.15 ರಿಂದ 0.300 ಗಂಟೆ ತನಕ ಪಂಚನಾಮೆ ಕ್ರಮ ಜರುಗಿಸಿ ಅಮಾನತುಪಡಿಸಿಕೊಂಡರು ಎಂದರೆ ಸರಿಯಲ್ಲ.

ಆರೋಪಿಯ ಬಳಿ ಮಧ್ಯ ಮಾರಾಟ ಮಾಡಿದ ರೂ. 1,210/- ಹಣವನ್ನು ಸಹ ನಿ ಪಿ 3 ರಡಿಯಲಿ ಅಮಾನತುಪಡಿಸಿಕೊಂಡರು ಎಂದರೆ ಸರಿಯಲ್ಲ. ಮಹಜರ್ ಕಾಲಕ್ಕೆ ಫೋಟೋಗಳನ್ನು ತೆಗೆದರು ಎಂದರೆ ಗೊತ್ತಿಲ್ಲ. ಈ ಸಂಬಂಧ ನಾನು ತನಿಖಾದಿಕಾರಿಯವರಿಗೆ ಈಗ ಓದಿ ಹೇಳಿದಂತೆ "ದಿ. 06.04.2023 ರಂದು ಮ. 12.30ಕ್ಕೆ ............ ಆರೋಪಿ ಪ್ರಕಾಶ್ ಮತ್ತು ಹಾಗೂ ಸ್ವತ್ತಗಳನ್ನು ನೋಡಿದರೆ ಗುರುತಿಸುತ್ತೇನೆ" ಎಂದು ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯ ಅಲ್ಲಗೆಳೆದ ಹೇಳಿಕೆಯನ್ನು ನಿ ಪಿ 8 ಎಂದು ಗುರುತಿಸಲಾಯಿತು. ಈ ಎಲ್ಲ ವಿಚಾರ ಗೊತ್ತಿದ್ದರೂ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿ ಪರ ಶ್ರೀಮತಿ ಎ. ಜಿ. ಕೆ. ವಕೀಲರಿಂದಃ** ಆರೋಪಿ ಪರ ವಕೀಲರು ಪಾಟೀ ಸವಾಲು ಇಲ್ಲ ಎಂದು ತಿಳಿಸಿರುತ್ತಾರೆ.

**ಮರು ವಿಚಾರಣೆಃ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚಿಸಿದೆ)**

Sd/-

ಸಿವಿಲ್ ನ್ಯಾಯಾಧೀಶರು

ಮತ್ತು ಪ್ರದನ್ಯಾದಂ., ಪೊನ್ನಂಪೇಟೆ